**ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾ.ದಃ ನ್ಯಾಯಾಲಯಃ ಶೃಂಗೇರಿ**

**ಸಿ.ಸಿ : 447/2022**

**ಸಾಕ್ಷಿದಾರರ ಹೆಸರು : ಸಂಪತ್ ಪಟೇಲ್**

**ತಂದೆಯ ಹೆಸರು : ಶಿವನಂಜೇಗೌಡ**

**ವಯಸ್ಸು : 29 ವರ್ಷ**

**ಉದ್ಯೋಗ : ವಲಯರಣ್ಯಾಧಿಕಾರಿ**

**ವಾಸಸ್ಥಳ : ಗೋಪಿನಾಥನ್**

**ಸಿ.ಡಬ್ಲ್ಯೂ - 01**

**ಪಿ.ಡಬ್ಲ್ಯೂ - 01**

**ದಿನಾಂಕಃ 19.04.2023 ರಂದು ಪ್ರಮಾಣವಚನ ಬೋಧಿಸಲಾಯಿತು.**

**:: ಮುಖ್ಯ ವಿಚಾರಣೆ : ಮಾನ್ಯ : ಎಪಿಪಿಯವರಿಂದ ::**

ಫೆಬ್ರವರಿ 2019 ರಿಂದ ಜನವರಿ 2022 ರವರೆಗೆ ನಾನು ಶೃಂಗೇರಿ ವಲಯ ಅರಣ್ಯಾಧಿಕಾರಿಯಾಗಿ ಕರ್ತವ್ಯ ಸಲ್ಲಿಸಿರುತ್ತೇನೆ. ದಿಃ29/02/2020 ರಂದು ನಾನು ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವಾಗ ಸಂಜೆ ಸುಮಾರು 4.30 ಗಂಟೆಗೆ ದೂರವಾಣಿ ಮುಖಾಂತರ ಬಾಪ್ತುದಾರಿಂದ ಶೃಂಗೇರಿ ನಗರದ ಕಾಂಚೀನಗರದ 1 ನೇ ಆರೋಪಿ ಮನೆಯಲ್ಲಿ ಅಕ್ರಮವಾಗಿ ಶ್ರೀಗಂಧದ ತುಂಡುಗಳನ್ನು ಅಕ್ರಮವಾಗಿ ದಾಸ್ತಾನು ಮಾಡಿರುವ ಬಗ್ಗೆ ಮಾಹಿತಿ ಬಂದಿದ್ದು, ಚಾಸಾ 2 ರಿಂದ 4 ರವರಿಗೆ ಮಾಹಿತಿ ತಿಳಿಸಿ ನಮ್ಮ ಇಲಾಖಾ ಜೀಪಿನಲ್ಲಿ 1 ನೇ ಆರೋಪಿ ಮನೆ ಹತ್ತಿರ ಹೋಗಿ ಪಂಚರಾದ ಚಾಸಾ 5 ರಿಂದ 8 ರವರನ್ನು ಬರಮಾಡಿಕೊಂಡು ಅವರಿಗೆ ವಿಚಾರ ತಿಳಿಸಿ ದಾಳಿಗೆ ಸಹಕರಿಸಲು ಕೇಳಿಕೊಂಡಿದ್ದು, ಅವರು ಒಪ್ಪಿದ್ದರಿಂದ ಪಂಚರ ಜೊತೆ ನಾವುಗಳು 1 ನೇ ಆರೋಪಿ ಮನೆ ಒಳಗೆ ಹೋಗಿ ನೋಡಲು ಅವರ ಮನೆ ಹಾಲ್ ನಲ್ಲಿ ಏನು ಸಿಕ್ಕಿರುವುದಿಲ್ಲ. ಮತ್ತೊಂದು ಕೋಣೆಯಲ್ಲಿ ನೋಡಿದಾಗ 4 ಶ್ರೀಗಂಧದ ತುಂಡುಗಳು ಸಿಕ್ಕಿರುತ್ತದೆ. ಪುನಃ ಹುಡುಕಾಡಿದಾಗ ಸದರಿ ಕೋಣೆಯ ಮಂಚದ ಕೆಳಗಡೆ ರೈಫಲ್ ಗನ್, ಒಂದು ಏರ್ ಪಿಸ್ತೂಲ್, ಪಿಸ್ತೂಲ್ ಪೆಲ್ಲೇಟ್ಸ್, ರೈಫಲ್ ಪೆಲ್ಲೇಟ್ಸ್ , ಎಲೆಕ್ಟ್ರಾನಿಕ್ ಡೆಟಾನಿನೇಟರ್, ಬ್ಲಸ್ಟಿಂಗ್ ಕನೆಕ್ಟಿಂಗ್ ವೈಯರ್, ಗನ್ ಕ್ಲಿನಿಂಗ್ ಆಯಲ್, ಗನ್ ಪೌಡರ್, ಜಿಲಾಟಿನ್ ಟ್ಯೂಬ್, ಫೈಬರ್ ಐಟಂ ಈ ಎಲ್ಲಾ ವಸ್ತುಗಳು ಒಂದು ಪ್ಲಾಸ್ಟಿಕ್ ಚೀಲದಲ್ಲಿ

ಇದ್ದವು. ಸದರಿ ವಸ್ತುಗಳನ್ನು ಪಂಚರ ಸಮಕ್ಷಮ ಸಂಜೆ 5 ರಿಂದ 6.05 ಗಂಟೆಯವರೆಗೆ ಮಹಜರ್ ಮಾಡಿ, ಮಹಜರ್ ಮೂಲಕ ಸದರಿ ವಸ್ತುಗಳನ್ನು ಜಬ್ತು ಮಾಡಿರುತ್ತೇವೆ. ಸಾಕ್ಷಿಯು ಮಹಜರ್ ನೋಡಿ ಗುರುತಿಸಿದ್ದು ಅದನ್ನು ನಿಪಿ 1 ಎಂದು ಗುರುತಿಸಲಾಯಿತು, ಸಾಕ್ಷಿಯ ಸಹಿಯನ್ನು 1 ಎ ಎಂದು ಗುರುತಿಸಲಾಯಿತು. ನಂತರ ಶ್ರೀಗಂಧದ 4 ತುಂಡುಗಳನ್ನು ಅಳತೆ ಮಾಡಿ ನಮ್ಮ ವಶಕ್ಕೆ ಪಡೆದುಕೊಂಡು ನಾವು ಅರಣ್ಯ ಇಲಾಖೆ ಸಂಬಂಧಿಸಿ ಪ್ರಕರಣ ದಾಖಲೆ ಮಾಡಿರುತ್ತೇವೆ. ನಂತರ ಇನ್ನುಳಿದ ಸ್ಪೋಟಕ ವಸ್ತುಗಳಿಗೆ ಸಂಬಂಧಿಸಿ ಸಂಬಂಧಪಟ್ಟ ಪೋಲಿಸರಿಗೆ ಮಾಹಿತಿ ತಿಳಿಸಿ, ಮೇಲಾಧಿಕಾರಿಗಳಿಗೆ ವಿಷಯ ತಿಳಿಸಿ ಅವರ ಆದೇಶದಂತೆ ನ್ಯಾಯಾಲಯಕ್ಕೆ ಬಂದು ನ್ಯಾಯಾಲಯದ ಆದೇಶ ಪಡೆದು ನಂತರ ಸ್ಪೋಟಕ ವಸ್ತುಗಳಿಗೆ ಸಂಬಂಧಿಸಿ ದೂರನ್ನು ಶೃಂಗೇರಿ ಪೋಲಿಸ್ ಠಾಣೆಯಲ್ಲಿ ನೀಡಿರುತ್ತೇನೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 2 ಎಂದು ಗುರುತಿಸಲಾಯಿತು, ಸಾಕ್ಷಿಯ ಸಹಿಯನ್ನು 2 ಎ ಎಂದು ಗುರುತಿಸಲಾಯಿತು. ನಂತರ ಸ್ಪೋಟಕ ವಸ್ತುಗಳನ್ನು ದಿಃ 03/03/2020 ರಂದು ಮಧ್ಯಾಹ್ನ 1 ರಿಂದ 2 ಗಂಟೆಯವರಿಗೆ ಚಾಸಾ 9 ಮತ್ತು 10 ರವರ ಸಮಕ್ಷಮ ಮಹಜರ್ ಮೂಲಕ ಪೋಲಿಸರ ವಶಕ್ಕೆ ಕೊಟ್ಟಿರುತ್ತೇವೆ. ಸಾಕ್ಷಿಯು ಮಹಜರ್ ನೋಡಿ ಗುರುತಿಸಿದ್ದು ಅದನ್ನು ನಿಪಿ 3 ಎಂದು ಗುರುತಿಸಲಾಯಿತು, ಸಾಕ್ಷಿಯ ಸಹಿಯನ್ನು 3 ಎ ಎಂದು ಗುರುತಿಸಲಾಯಿತು. ಸದರಿ ಸಮಯದಲ್ಲಿ ತೆಗೆದ ಪೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 4 ರಿಂದ 7 ಎಂದು ಗುರುತಿಸಲಾಯಿತು.

ನಂತರ ಶೃಂಗೇರಿ ಪೋಲಿಸರು ನನ್ನನ್ನು 1 ನೇ ಆರೋಪಿ ಮನೆಗೆ ಮಹಜರ್ ಮಾಡಲು ಕರೆದುಕೊಂಡು ಹೋಗಿರುತ್ತಾರೆ. ನನ್ನ ಮತ್ತು ಚಾಸಾ 9 ಮತ್ತು 10 ರವರ ಸಮಕ್ಷಮ ಮಧ್ಯಾಹ್ನ 2 ರಿಂದ 2.40 ರವರೆಗೆ 1 ನೇ ಆರೋಪಿಯ ಮನೆಯ ಸ್ಥಳ ಮಹಜರ್ ಮಾಡಿರುತ್ತಾರೆ. ಆ ಸಮಯದಲ್ಲಿ ಪೋಟೋಗಳನ್ನು ತೆಗೆದಿರುತ್ತಾರೆ. ಸಾಕ್ಷಿಯು ಮಹಜರ್ ನೋಡಿ ಗುರುತಿಸಿದ್ದು ಅದನ್ನು ನಿಪಿ 8 ಎಂದು ಗುರುತಿಸಲಾಯಿತು, ಸಾಕ್ಷಿಯ ಸಹಿಯನ್ನು 8 ಎ ಎಂದು ಗುರುತಿಸಲಾಯಿತು. ಸದರಿ ಸಮಯದಲ್ಲಿ ತೆಗೆದ ಪೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 9 ಮತ್ತು 10 ಎಂದು ಗುರುತಿಸಲಾಯಿತು. ಸಾಕ್ಷಿಯು ಸದರಿ ಪ್ರಕರಣಕ್ಕೆ ಸಂಬಂಧಿಸಿ ದಾಖಲೆಗಳನ್ನು ಶೃಂಗೇರಿ ಪೋಲಿಸ್ ಠಾಣೆಗೆ ನೀಡಿರುತ್ತಾರೆ.

ಸಾಕ್ಷಿಯು ರೈಫಲ್ ಗನ್, ಒಂದು ಏರ್ ಪಿಸ್ತೂಲ್, ಪಿಸ್ತೂಲ್ ಪೆಲ್ಲೇಟ್ಸ್, ರೈಫಲ್ ಪೆಲ್ಲೇಟ್ಸ್ , ಎಲೆಕ್ಟ್ರಾನಿಕ್ ಡೆಟಾನಿನೇಟರ್, ಬ್ಲಸ್ಟಿಂಗ್ ಕನೆಕ್ಟಿಂಗ್ ವೈಯರ್, ಗನ್ ಕ್ಲಿನಿಂಗ್ ಆಯಲ್, ಗನ್ ಪೌಡರ್, ಜಿಲಾಟಿನ್ ಟ್ಯೂಬ್, ಫೈಬರ್ ಐಟಂ ವಸ್ತುಗಳನ್ನು ನೋಡಿ

ಗುರುತಿಸಿದ್ದು ಅವುಗಳನ್ನು ಕ್ರಮವಾಗಿ MO.1 ರಿಂದ 10 ಎಂದು ಗುರುತಿಸಲಾಯಿತು. ಸಾಕ್ಷಿಯು ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು ಆರೋಪಿ ಪರ ಶ್ರೀ. ಹೆಚ್ ಆರ್ ಯು ವಕೀಲರಿಂದ :**

ನಮ್ಮ RFO ಕಚೇರಿ ಶೃಂಗೇರಿಯ ಕಾಂಚೀನಗರದಲ್ಲಿ ಇದೆ ಎಂದರೆ ಸರಿ. ನಮ್ಮ ಕಚೇರಿಗೆ ಹೊಂದಿಕೊಂಡು ನೂರಾರು ಮನೆಗಳು ಇವೆ ಎಂದರೆ ಸರಿ. ನನಗೆ ಮಾಹಿತಿ ಬಂದ ಸಮಯದಲ್ಲಿ ಚಾಸಾ 2 ರಿಂದ 4 ನಮ್ಮ ಕಚೇರಿಯಲ್ಲಿದ್ದರು. ನಮ್ಮ ಕಚೇರಿಯಿಂದ 1 ನೇ ಆರೋಪಿ ಮನೆ 2 ಕಿ ಮೀ ದೂರದಲ್ಲಿರುತ್ತದೆ. ಸದರಿ 1 ನೇ ಆರೋಪಿ ಮನೆ ಕಾಂಚೀನಗರದಲ್ಲಿ ಇರುತ್ತದೆ. ನಮ್ಮ ಕಚೇರಿಯ ಅಕ್ಕಪಕ್ಕದವರನ್ನು ಸಾಕ್ಷಿಯಾಗಿ ಬರಮಾಡಿಕೊಳ್ಳಲು ಯಾವುದೇ ಪ್ರಯತ್ನ ಪಟ್ಟಿರುವುದಿಲ್ಲ. 1 ನೇ ಆರೋಪಿ ಮನೆಯ ಸುತ್ತಮುತ್ತಲು ವಾಸಸ್ಥಳದ ಮನೆಗಳಿದ್ದು, ಸದರಿ ಮನೆಯವರನ್ನು ಸಹ ಸಾಕ್ಷಿದಾರರನ್ನು ಬರಮಾಡಿಕೊಳ್ಳಲು ಪ್ರಯತ್ನ ಪಟ್ಟಿರುತ್ತೇವೆ ಆದರೆ ಯಾರು ಒಪ್ಪಿರುವುದಿಲ್ಲ. ಸದರಿ ವ್ಯಕ್ತಿಗಳ ಹೆಸರು ನನಗೆ ಗೊತ್ತಿರುವುದಿಲ್ಲ. ಚಾಸಾ 5 ರಿಂದ 10 ನಾವು ಜೀಪಿನಲ್ಲಿ ಹೋಗುವಾಗ ಆರೋಪಿಯ ಮನೆ ಹತ್ತಿರ ಇದ್ದರು. ಶೃಂಗೇರಿಯ ಸುತ್ತಮುತ್ತಲಿನ ಊರುಗಳಾದ ಮಾನಗಾರು, ಕಾಂಚೀನಗರ, ಗಿಣಿಗಿಣಿ, ಭಾರತೀನಗರ ನನಗೆ ಗೊತ್ತಿದೆ. ಚಾಸಾ 5 ರಿಂದ 10 ಕಲ್ಕಟ್ಟೆ , ಮಾನಗಾರು ವಾಸಿಗಳು ಎಂದರೆ ನನಗೆ ಗೊತ್ತಿಲ್ಲ. ಚಾಸಾ 7 ಪಟ್ಟಣ ಪಂಚಾಯಿತಿಯ ಅಧ್ಯಕ್ಷರು ಎಂದರೆ ಸರಿ. ಚಾಸಾ 7 ಬಿಜೆಪಿ ಪಕ್ಷದಿಂದ ಆಯ್ಕೆ ಆಗಿ ಹೋಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ತನಿಖೆಗೆ ಬೇಕಾಗಿರುವ ಎಲ್ಲಾ ವಸ್ತುಗಳನ್ನು ಸರ್ಕಾರಿ ಒದಗಿಸಿಕೊಟ್ಟಿರುತ್ತದೆ ಎಂದರೆ ಸರಿ. ಕೃತ್ಯದ ಬಗ್ಗೆ ಪೂರ್ವ ಮಾಹಿತಿ ಇದ್ದಲ್ಲಿ ಕೃತ್ಯ ಸ್ಥಳಕ್ಕೆ ಹೋಗುವ ಮೊದಲು ಬೇಕಾಗುವ ಎಲ್ಲಾ ವಸ್ತುಗಳನ್ನು ತೆಗೆದುಕೊಂಡು ಹೋಗುತ್ತೇವೆ ಎಂದರೆ ಸರಿ. ನಿಪಿ 2 ದೂರನ್ನು ನಾನೇ ಪೋಲಿಸರಿಗೆ ನೀಡಿರುತ್ತೇನೆ. ಸದರಿ ನಿಪಿ 2 ನ್ನು ದಿಃ 03/03/2020 ರಂದು ಬರೆದಿರುತ್ತೇನೆ. ಚಾಸಾ 2 ರಿಂದ 4 ನಮ್ಮ ಅಧೀನ ಸಿಬ್ಬಂದಿಗಳು ಎಂದರೆ ಸರಿ. 1 ನೇ ಆರೋಪಿ ಮನೆಗೆ ದಾಳಿ ಮಾಡುವಾಗ ನಾವುಗಳು ಚಾಸಾ 1 ರಿಂದ 8 ಒಟ್ಟಿಗೆ ಹೋಗಿರುತ್ತೇವೆ. ನಮಗೆ ಹೇಳಲಾದ ವಸ್ತುಗಳು 1 ನೇ ಆರೋಪಿ ಮನೆಯಲ್ಲಿಸಿಕ್ಕಿದಾಗ ಅವುಗಳ ಪೋಟೋ ತೆಗೆಯಲು ಪ್ರಯತ್ನ ಪಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸಾಕಷ್ಟು ಜನರು ಮತ್ತು ಮಾಧ್ಯಮದವರು ಸೇರಿರುತ್ತಾರೆ ಆದ್ದರಿಂದ ತೆಗೆದಿರುವುದಿಲ್ಲ ಎಂದು ನುಡಿದಿರುತ್ತಾರೆ.

ಯಾವುದೇ ವಸ್ತುಗಳು 1 ನೇ ಆರೋಪಿ ಮನೆಯಲ್ಲಿ ಸಿಕ್ಕಿರುವುದಿಲ್ಲ, ಸಿಕ್ಕಿದ್ದಲ್ಲಿ ನಾನು ಪೋಟೋ ತೆಗೆಯುತ್ತಿದ್ದೆ ಎಂದರೆ ಸರಿಯಲ್ಲ. ನಾನು ಸದರಿ 1 ನೇ ಆರೋಪಿ ಮನೆಯಲ್ಲಿ 1 ರಿಂದ 1.15 ಗಂಟೆಯವರೆಗೆ ಇದ್ದೆ. ದಾಳಿ ಹೋದಾಗ ನಮಗೆ ಯಾವುದೇ ತೊಂದರೆ ಆದಲ್ಲಿ ಪೋಲಿಸ್ ಠಾಣೆಗೆ ಕರೆ ಮಾಡಿ ತನಿಖೆಗೆ ತೊಂದರೆ ಆಗದ ರೀತಿಯಲ್ಲಿ ಪೋಲಿಸರಿಂದ ರಕ್ಷಣಾ ಪಡೆಯಲು ಅವಕಾಶ ಇರುತ್ತದೆ ಎಂದರೆ ಸರಿ. ನಾವು ಆ ರೀತಿ ಪೋಲಿಸರಿಗೆ ಕರೆ ಮಾಡಿ ಹೆಚ್ಚಿನ ಸಿಬ್ಬಂದಿಯರನ್ನು ಕಳುಹಿಸಲು ಕೇಳಿಕೊಳ್ಳಲು ಪ್ರಯತ್ನ ಮಾಡಿರುವುದಿಲ್ಲ. ಸದರಿ ವಸ್ತುಗಳು ಚೀಲದಲ್ಲಿ ಇದ್ದು, ನಾವು ಚೀಲ ಸಮೇತ ವಶಕ್ಕೆ ಪಡೆದಿರುತ್ತೇವೆ. ಸದರಿ ಚೀಲ ನ್ಯಾಯಾಲಯದ ಮುಂದೆ ಇರುವುದಿಲ್ಲ ಎಂದರೆ ಸರಿಯಲ್ಲ. MO.1 ರಿಂದ 10 1 ನೇ ಆರೋಪಿಯ ಮನೆಯಲ್ಲಿ ಇರುವ ಬಗ್ಗೆ ಮಹಜರ್ ಮಾಡಿದ್ದು, ಸದರಿ ಸಮಯಲ್ಲಿ ಪೋಟೋ ತೆಗೆದಿರುವುದಿಲ್ಲ ಎಂದರೆ ಸರಿ. ನಮ್ಮ ಕಚೇರಿಗೆ ಸಂಬಂಧಿಸಿದಂತೆ ನಾನೇ ಹಿರಿಯ ಅಧಿಕಾರಿ ಎಂದರೆ ಸರಿ. ಶ್ರೀಗಂಧ ಪ್ರಕರಣದಲ್ಲಿ ಈವರೆಗೂ ಅಂತಿಮ ಪಟ್ಟಿಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿ. 1 ನೇ ಆರೋಪಿ ಮನೆಯಲ್ಲಿ MO.1 ರಿಂದ 10 ಶ್ರೀಗಂಧ ತುಂಡುಗಳು ಇದ್ದಲ್ಲಿ ಶ್ರೀಗಂಧ ಪ್ರಕರಣದಲ್ಲಿ ದೋಷಾರೋಪಣಾ ಪತ್ರ ಸಲ್ಲಿಸಿತ್ತಿದ್ದೆವು ಎಂದರೆ ನನಗೆ ಗೊತ್ತಿಲ್ಲ. ನಿಪಿ 2 ದೂರನ್ನು ನಾನೇ ಹೇಳಿ ಬರೆಸಿರುತ್ತೇನೆ. ಸದರಿ ದೂರಿನಲ್ಲಿ 1 ನೇ ಆರೋಪಿ ಮನೆಯಲ್ಲಿ ಆಮೆಗಳು ಇರುವ ಬಗ್ಗೆ ನಮೂದಾಗಿರುತ್ತದೆ ಎಂದರೆ ಸರಿ. ದಿಃ 29/02/2020 ರಂದು ನಾವು 1 ನೇ ಆರೋಪಿ ಮನೆಗೆ ಹೋದಾಗ ಆಮೆಗಳು ಇರಲಿಲ್ಲ. ಸಾಕ್ಷಿ ಮುಂದುವರೆದು 1 ನೇ ಆರೋಪಿ ಮನೆಯಲ್ಲಿ ಆಮೆಗಳು ಇದ್ದು, ಆ ವಿಷಯಕ್ಕೆ ಸಂಬಂಧಿಸಿ ಬೇರೆ ಪ್ರಕರಣ ದಾಖಲಿಸಿದ್ದೇವೆ ಎಂದು ನಮೂದು ಮಾಡಿರುತ್ತೇವೆಂದು ನುಡಿದಿರುತ್ತಾರೆ. ನಿಪಿ 1 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತು. ಮಹಜರ್ ಬರೆಯುವ ಸಮಯದಲ್ಲಿ ಶೃಂಗೇರಿ ಪೋಲಿಸರನ್ನು ನಾನು ಬರಮಾಡಿಕೊಂಡಿರುವುದಿಲ್ಲ.

ನಾನು 1 ನೇ ಆರೋಪಿ ಮನೆಯಲ್ಲಿ MO.1 ರಿಂದ 10 ನ್ನು ಪಂಚರ ಸಮಕ್ಷಮ ಮಹಜರ್ ಮೂಲಕ ಜಬ್ತು ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ನಿಪಿ 1 ನ್ನು ನಾವು ಠಾಣೆಯಲ್ಲಿ ಬರೆದು ಸೃಷ್ಟಿಟೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದಿಃ 03/03/2020 ರಂದು MO.1 ರಿಂದ 10 ಮಹಜರ್ ಮೂಲಕ ಸಾಕ್ಷಿದಾರರ ಸಮಕ್ಷಮ ಶೃಂಗೇರಿ ಪೋಲಿಸರಿಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 7 ರಲ್ಲಿ ಕಾಣುತ್ತಿರುವ ವಸ್ತುಗಳು ಆರೋಪಿತರಿಗೆ ಸಬಂಧಿಸಿದ್ದು ಅಲ್ಲ ಎಂದರೆ ಸರಿಯಲ್ಲ. ನಿಪಿ 7 ರಲ್ಲಿ ತೋರಿಸಿರುವ ವಸ್ತುಗಳು ನಾವು ಮತ್ತು ಶೃಂಗೇರಿ ಪೋಲಿಸರು ರಾಜಕೀಯ ಕಮ್ಮಕ್ಕಿಗೆ ಒಳಗಾಗಿ ಸುಳ್ಳು ಸೃಷ್ಟಿ ಮಾಡಿರುತ್ತೇವೆ ಎಂದರೆ

ಸರಿಯಲ್ಲ. ನಂತರ ಪೋಲಿಸರು ಆರೋಪಿತರ ಮನೆಗೆ ಕರೆದುಕೊಂಡು ಹೋಗಿದ್ದು, 1 ನೇ ಆರೋಪಿ ಮನೆ ತೋರಿಸಿರುವ ಬಗ್ಗೆ ಮಹಜರ್ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 3 ರಿಂದ 7 ದಾಖಲೆಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿರುತ್ತೇವೆಂದರೆ ಸರಿಯಲ್ಲ. MO.1 ರಿಂದ 10 ಮತ್ತು ಇತರ ಕಾನೂನು ಬಾಹಿರ ವಸ್ತುಗಳು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿರುತ್ತೇವೆಂದರೆ ಸರಿಯಲ್ಲ. ಚಾಸಾ 7 ಪಟ್ಟಣ ಪಂಚಾಯಿತಿ ಅಧ್ಯಕ್ಷರಾಗಿದ್ದು, ನಮ್ಮ ಮನೆ ಪ್ರಭಾವ ಬೀರಿ ಸುಳ್ಳು ಪ್ರಕರಣವನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದಿಃ 29/02/2020 ರಂದು 1 ನೇ ಆರೋಪಿ ಮನೆಗೆ ಹೋಗಿದ್ದಾಗಲೀ, ಯಾವುದೇ ವಸ್ತುಗಳನ್ನು ಜಬ್ತು ಮಾಡಿರುವುದಿಲ್ಲ, ಯಾವುದೇ ಮಹಜರ್ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. MO.1 ರಿಂದ 10 ಮತ್ತು ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂರದರೆ ಸರಿಯಲ್ಲ.

**ಃಮರುವಿಚಾರಣೆ ಇಲ್ಲಃ**

**(ದಿನಾಂಕಃ 19.04.2023 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

Sd/-
**ಪ್ರ.ದ.ನ್ಯಾ.ದಂಃ ಶೃಂಗೇರಿ**

**ಸಾಕ್ಷಿ ಸಹಿಃ**